**ಶಿವಮೊಗ್ಗ,ದಾವಣಗೆರೆ ಮತ್ತು ಚಿತ್ರದುರ್ಗ ಜಿಲ್ಲಾ ಸಹಕಾರ ಹಾಲು ಉತ್ಪಾದಕರ ಸಂಘಗಳ ಒಕ್ಕೂಟ ನಿ.,**
**ಮಾಚೇನಹಳ್ಳಿ, ನಿದಿಗೆ(ಅಂಚೆ), ಶಿವಮೊಗ್ಗ- 577 222, ☎ 08182-246165** www.shimul.coop

ಐ.ಎಫ್.ಟಿ. ಸಂಖ್ಯೆ/ಶಿದಾಚಿಸಹಾಒ/ಮಾರುಕಟ್ಟೆ/ಟೆಂಡರ್/6504/2017-18 **ದಿನಾಂಕ: 11.10.2017**

**-: *ಸಾಗಿಸಲು ವಾಹನಗಳನ್ನು* *ಒಂದು ವರ್ಷ/ ಎರಡು ವರ್ಷದ* *ಅವಧಿಗೆ ಗುತ್ತಿಗೆ ಆಧಾರದಲ್ಲಿ***
***ವಾಹನ ಒದಗಿಸಲು ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಟೆಂಡರ್ ಪ್ರಕಟಣೆ* :-**

ಶಿವಮೊಗ್ಗ, ದಾವಣಗೆರೆ ಮತ್ತು ಚಿತ್ರದುರ್ಗ ಜಿಲ್ಲಾ ಹಾಲು ಒಕ್ಕೂಟದ ವ್ಯಾಪ್ತಿಯಲ್ಲಿ ಬರುವ “ಕ್ಷೀರಭಾಗ್ಯ” ಯೋಜನೆಯಡಿ ದಾವಣಗೆರೆ, ಹರಿಹರ, ಹೊನ್ನಾಳಿ, ಚನ್ನಗಿರಿ ಹಾಗೂ ಹರಪನಹಳ್ಳಿ ತಾಲ್ಲೂಕು ಕೇಂದ್ರಗಳಿಂದ ಆಯಾ ತಾಲ್ಲೂಕಿನ ಸರ್ಕಾರಿ ಹಾಗೂ ಅನುದಾನಿತ ಶಾಲೆಗಳಿಗೆ ಕೆನೆಭರಿತ ಹಾಲಿನ ಪುಡಿಯನ್ನು ಸಾಗಾಣಿಕೆ ಮಾಡಲು ಸುರಕ್ಷಿತ ಕವಚವುಳ್ಳ ಸ್ವಂತ ವಾಹನ ಹೊಂದಿರುವ ಕನಿಷ್ಠ 1.5 ಟನ್ ಸಾಮರ್ಥ್ಯದ ವಾಹನಗಳನ್ನು ಒಂದು ವರ್ಷದ ಅವಧಿಗೆ ಗುತ್ತಿಗೆ ಆಧಾರದ ಮೇಲೆ ಒದಗಿಸಲು ಹಾಗೂ ಹಾಲು ವಿತರಣಾ ವಾಹನಗಳಿಗೆ 2010ರ ಅಥವಾ ನಂತರದ ಸಾಲಿನ ಇನ್ಸೂಲೆಟೆಡ್ ಕವಚವುಳ್ಳ ವಾಹನವನ್ನು ಎರಡು ವರ್ಷದ ಅವಧಿಗೆ ಒದಗಿಸಲು ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ https://eproc.karnataka.gov.in ಮೂಲಕ (ಟೆಕ್ನಿಕಲ್/ಕಮರ್ಷಿಯಲ್) ಟೆಂಡರ್ ಕರೆಯಲಾಗಿದ್ದು ವಾಹನಗಳನ್ನು ಹೊಂದಿರುವ ಮಾಲಿಕರು ಅರ್ಜಿಯನ್ನು ಸಲ್ಲಿಸಬಹುದಾಗಿದೆ.

**ಹಾಲಿನಪುಡಿ ಮಾರ್ಗಗಳ ವಿವರ :-**

| .ಕ್ರಸಂ | ಮಾರ್ಗಗಳ ಹೆಸರು | ಇ.ಎಂ.ಡಿ. ರೂ. | ಭದ್ರತಾ ಠೇವಣಿ ರೂ. | ಶಾಲೆಗಳ ಸಂಖ್ಯೆ (ಅಂದಾಜು) | ಮಾಹೆಯಾನ ಅಂದಾಜು ಹಾಲಿನಪುಡಿಯ ಸಾಗಾಣಿಕೆ ಪರಿಮಾಣ (ಕೆ.ಜಿ.ಗಳಲ್ಲಿ) | ವಾಹನಗಳ ಸಂಖ್ಯೆ (ಕನಿಷ್ಠ 1.5 ಟನ್ ಸಾಮರ್ಥ್ಯ) |
|---|---|---|---|---|---|---|
| 1 | ಹೊನ್ನಾಳಿ ತಾಲ್ಲೂಕು ಕೇಂದ್ರದಿಂದ ಹೊನ್ನಾಳಿ ತಾಲ್ಲೂಕಿನ ಶಾಲೆಗಳಿಗೆ ಹಾಲಿನ ಪುಡಿ ಸರಬರಾಜು ಮಾಡುವುದು | 20,000/- | 50,000/- | 270 | 7800 | 1 |
| 2 | ಚನ್ನಗಿರಿ ತಾಲ್ಲೂಕು ಕೇಂದ್ರದಿಂದ ಚನ್ನಗಿರಿ ತಾಲ್ಲೂಕಿನ ಶಾಲೆಗಳಿಗೆ ಹಾಲಿನ ಪುಡಿ ಸರಬರಾಜು ಮಾಡುವುದು | 20,000/- | 50,000/- | 355 | 9500 | 1 |
| 3 | ಹರಪನಹಳ್ಳಿ ತಾಲ್ಲೂಕು ಕೇಂದ್ರದಿಂದ ಹರಪನಹಳ್ಳಿ ತಾಲ್ಲೂಕಿನ ಶಾಲೆಗಳಿಗೆ ಹಾಲಿನ ಪುಡಿ ಸರಬರಾಜು ಮಾಡುವುದು | 20,000/- | 50,000/- | 330 | 11800 | 1 |
| 4 | ದಾವಣಗೆರೆ ತಾಲ್ಲೂಕು ಕೇಂದ್ರದಿಂದ ದಾವಣಗೆರೆ ತಾಲ್ಲೂಕಿನ ಶಾಲೆಗಳಿಗೆ ಹಾಲಿನ ಪುಡಿ ಸರಬರಾಜು ಮಾಡುವುದು | 20,000/- | 50,000/- | 470 | 15500 | 1 |
| 5 | ಹರಿಹರ ತಾಲ್ಲೂಕು ಕೇಂದ್ರದಿಂದ ಹರಿಹರ ತಾಲ್ಲೂಕಿನ ಶಾಲೆಗಳಿಗೆ ಹಾಲಿನ ಪುಡಿ ಸರಬರಾಜು ಮಾಡುವುದು | 20,000/- | 50,000/- | 198 | 7600 | 1 |

ಮುಂದುವರೆದಿದೆ. . . . . . .

**ಹಾಲು ವಿತರಣಾ ಮಾರ್ಗಗಳ ವಿವರ :–**

| **ಮಾರ್ಗದ ಸಂಖ್ಯೆ** | **ಹಾಲು ವಿತರಣಾ ಮಾರ್ಗದ ಹೆಸರು/ ಹಾಲು ಮತ್ತು ಹಾಲಿನ ಉತ್ಪನ್ನಗಳನ್ನು ವಿತರಣೆ** | **ವಾಹನ ಸಾಮರ್ಥ್ಯ** (ಕ್ರೇಟುಗಳಲ್ಲಿ) | **ದಿನದ ಅಂದಾಜು ಅಂತರ ಕಿ.ಮೀ** | **ಇ.ಎಂ.ಡಿ** ರೂ.ಗಳಲ್ಲಿ | **ಭದ್ರತಾ ಠೇವಣಿ** ರೂ.ಗಳಲ್ಲಿ |
|---|---|---|---|---|---|
| 6 | **ದಾವಣಗೆರೆ ಡೇ ಕೌಂಟರ್–4** (ಬೆಳಗ್ಗೆ) :– ದಾವಣಗೆರೆ ಡೈರಿಯಿಂದ ಹಾಲು ಮತ್ತು ಹಾಲು ಉತ್ಪನ್ನಗಳನ್ನು ಪಡೆದು ಡೀಲರ್/ಡೇ ಕೌಂಟರ್ ಅಂಗಡಿಗಳಿಗೆ ವಿತರಣೆ ಮಾಡಿ ಹಾಗೂ ನಗದನ್ನು ಸಂಗ್ರಹಿಸಿ ದಾವಣಗೆರೆ ಡೈರಿಗೆ ಪಾವತಿಸುವುದು. | ಟಾಟಾ ಏಸ್ | 35 ಕಿ.ಮೀ | 25,000/– | 50,000/– |
| 7 | **ನಗರ–ಸಿಗಂದೂರು** – ಮಾಸ್ತಿಕಟ್ಟೆ ಮಾರ್ಗದಲ್ಲಿ ನಗರದಲ್ಲಿ ಹಾಲು ಮತ್ತು ಹಾಲು ಉತ್ಪನ್ನಗಳನ್ನು ಪಡೆದು ಸಂಪೆಕಟ್ಟೆ, ನಿಟ್ಟೂರು, ಸಿಗಂದೂರು ಡೀಲರ್‌ಗಳಿಗೆ ವಿತರಣೆ ಮಾಡುವುದು ಹಾಗೂ ನಗದನ್ನು ಸಂಗ್ರಹಿಸಿ ಮಾಸ್ತಿಕಟ್ಟೆ ಮಾರ್ಗದ ಗುತ್ತಿಗೆದಾರರಿಗೆ ಜಮಾ ಮಾಡುವುದು. | ಮ್ಯಾಕ್ಸ್ ಪಿಕ್‌ಅಪ್ | 130 ಕಿ.ಮೀ | 25,000/– | 1,00,000/– |
| 8 | **ವಡ್ಡಿನಕೊಪ್ಪ–ಯಲವಟ್ಟಿ ಡೇ ಕೌಂಟರ್:–** ಶಿವಮೊಗ್ಗ ಸಹ್ಯಾದ್ರಿ ಕಾಲೇಜ್ ಸರ್ಕಲ್‌ನಲ್ಲಿ ಹಾಲು ಮತ್ತು ಹಾಲು ಉತ್ಪನ್ನಗಳನ್ನು ಪಡೆದು ಯಲವಟ್ಟಿ, ಹಸೂಡಿ ಫಾರಂ, ಹಕ್ಕಿ–ಪಿಕ್ಕಿ ಕ್ಯಾಂಪ್‌ಗಳಿಗೆ ಬೆಳಗ್ಗೆ ಸರತಿಯಲ್ಲಿ ಹಾಗೂ ವಡ್ಡಿನಕೊಪ್ಪ, ಸಂತೆಕಡೂರು, ಕಾಚಿನಕಟ್ಟೆ, ಕುಸ್ಕೂರು, ಮತ್ತೂರು ಪ್ರದೇಶಗಳಿಗೆ ಮಧ್ಯಾಹ್ನದ ಸರತಿಯಲ್ಲಿ ಡೇ ಕೌಂಟರ್ ಅಂಗಡಿಗಳಿಗೆ ವಿತರಣೆ ಮಾಡಿ ಹಾಗೂ ನಗದನ್ನು ಸಂಗ್ರಹಿಸಿ ಒಕ್ಕೂಟಕ್ಕೆ ಪಾವತಿಸುವುದು. | ಗೂಡ್ಸ್ ಆಟೋ | 45 ಕಿ.ಮೀ | 25,000/– | 50,000/– |
| 9 | **ಚಿತ್ರದುರ್ಗ 4ನೇ ಮಾರ್ಗ** (ಬೆಳಗ್ಗೆ) :– ಶಿವಮೊಗ್ಗ ಡೈರಿಯಿಂದ ಹಾಲು ಮತ್ತು ಹಾಲು ಉತ್ಪನ್ನಗಳನ್ನು ಪಡೆದು ಚನ್ನಗಿರಿ, ಹೊಳಲ್ಕೆರೆ, ಹಾಗೂ ಇತರೆ ಗ್ರಾಮೀಣ ಪ್ರದೇಶಗಳ ಮತ್ತು ಚಿತ್ರದುರ್ಗನಗರದ ಡೀಲರ್‌ಗಳಿಗೆ ವಿತರಣೆ ಮಾಡಿ ಹಾಗೂ ನಗದನ್ನು ಸಂಗ್ರಹಿಸಿ ಒಕ್ಕೂಟಕ್ಕೆ ಪಾವತಿಸುವುದು. | 500 ಕ್ರೇಟ್ ಸಾಮರ್ಥ್ಯ | 239 ಕಿ.ಮೀ | 25,000/– | 3,00,000/– |

| | | |
|---|---|---|
| 1 | **ಟೆಂಡರ್ ಡೌನ್‌ಲೋಡ್ ಮಾಡಿಕೊಳ್ಳುವ ದಿನಾಂಕ** | **ದಿನಾಂಕ: 19.10.2017 ರಿಂದ** |
| 2 | **ಟೆಂಡರ್ ಫಾರಂಗಳನ್ನು ಇ–ಟೆಂಡರ್ ಮೂಲಕ ಸಲ್ಲಿಸಲು ಕೊನೆಯ ದಿನಾಂಕ** | ದಿನಾಂಕ: 16.11.2017 ರಂದು ಸಂಜೆ: 17.30ಗಂಟೆಯವರೆಗೆ |
| 3 | **ಟೆಕ್ನಿಕಲ್ ಟೆಂಡರ್ ತೆರೆಯುವ ದಿನ** | ದಿನಾಂಕ: **20.11.2017** ರಂದು ಬೆಳಿಗ್ಗೆ: **11.30** ಗಂಟೆಗೆ |
| 4 | **ಕಮರ್ಷಿಯಲ್ ಟೆಂಡರ್‌ಗಳನ್ನು ತೆರೆಯುವ ದಿನ** | ದಿನಾಂಕ: 23**.11.2017** ರಂದು ಬೆಳಿಗ್ಗೆ: **11.30** ಗಂಟೆಗೆ |

ಮುಂದುವರೆದಿದೆ. . . . . .

## ಹಾಲಿನಪುಡಿ ಸರಬರಾಜು ಮಾರ್ಗಗಳ ಷರತ್ತು ಮತ್ತು ನಿಬಂಧನೆಗಳು:-

1. ಅರ್ಜಿದಾರರು ತಾಲ್ಲೂಕು ಕೇಂದ್ರಗಳಿಂದ ಶಾಲೆಗಳಿಗೆ ಹಾಲಿನ ಪುಡಿ ಸಾಗಾಣಿಕೆ ದರವನ್ನು ಪ್ರತಿ ಕೆ.ಜಿ ಗೆ ನಮೂದಿಸುವುದು.
2. ಹಾಲಿನ ಪುಡಿಯನ್ನು ತಾಲ್ಲೂಕು ಕೇಂದ್ರಗಳಿಂದ ಶಾಲೆಗಳಿಗೆ ಹಾಲಿನ ಪುಡಿ ಸಾಗಾಣಿಕೆ ಮಾಡಲು ಟೆಂಡರ್‌ನಲ್ಲಿ ನಿಗದಿಪಡಿಸಿರುವ ಮೊತ್ತದಲ್ಲಿ ಲೋಡಿಂಗ್/ ಅನ್‌ಲೋಡಿಂಗ್ ಮೊತ್ತ ಹಾಗೂ ಅನ್ವಯಿಸುವ ಎಲ್ಲಾ ತೆರಿಗೆಗಳು ಸೇರಿರುತ್ತದೆ.
3. ಹಾಲಿನ ಪುಡಿಯನ್ನು ನಿಗಧಿತ ಸಮಯದಲ್ಲಿ ಸರಬರಾಜು ಮಾಡವುದು ಅತಿ ಮುಖ್ಯವಾಗಿರುತ್ತದೆ ಆದ ಕಾರಣ ತುರ್ತು ಸಂದರ್ಭದಲ್ಲಿ ನಿಗಧಿ ಪಡಿಸಿದ ವಾಹನಗಳ ಸಂಖ್ಯೆಗಿಂತ ಹೆಚ್ಚಿಗೆ ವಾಹನಗಳು ಬೇಕಾಗಿದಲ್ಲಿ ಗುತ್ತಿಗೆದಾರರು ಸ್ವಂತ ವಾಹನದ ಜೊತೆಗೆ ಬಾಡಿಗೆ ವಾಹನವನ್ನು ಒದಗಿಸಬೇಕಾಗಿರುತ್ತೆದೆ.
4. ಹಾಲಿನ ಪುಡಿಯ ಜೊತೆಗೆ ಇತರೆ ಯಾವುದೇ ಪದಾರ್ಥಗಳನ್ನು ಸರಬರಾಜು ಮಾಡಲು ಅವಕಾಶವಿರುವುದಿಲ್ಲ
5. ಹಾಲಿನ ಪುಡಿ ಆಹಾರ ಪದಾರ್ಥವಾಗಿದ್ದು ಇದರ ಸರಬರಾಜು ಆಹಾರ ಸುರಕ್ಷತಾ ಖಾಯಿದೆಯ ಷರತ್ತುಗಳಿಗೆ ಒಳಪಟ್ಟಿರಬೇಕಾಗಿರುತ್ತದೆ.
6. ಯಶಸ್ವಿ ಟೆಂಡರ್‌ದಾರರು ಹಾಲಿನ ಪುಡಿಯನ್ನು ಹವಾಮಾನ ಮತ್ತು ಇತರೆ ವೈಪರೀತ್ಯದಿಂದ ರಕ್ಷಿಸುವಂತೆ ಸಾಗಾಣಿಕೆಗೆ ಕವಚವುಳ್ಳ ವಾಹನವನ್ನು ಒದಗಿಸುವುದು ಹಾಗೂ ಸುರಕ್ಷಿತವಾಗಿ ಹಾಲಿನ ಪುಡಿಯನ್ನು ಸಾಗಾಣಿಕೆ ಮಾಡುವುದು.
7. ಸಾಮಾನ್ಯ ಸಂದರ್ಭಗಳಲ್ಲಿ ಗುತ್ತಿಗೆದಾರರು ಪ್ರಸ್ತುತ ವಾಹನ ಗುತ್ತಿಗೆ ಕರಾರಿನ ಪರಿ ಸಮಾಪ್ತಿಗೊಳಿಸುವಂತಿಲ್ಲ. ವಿಶೇಷ ಸಂದರ್ಭಗಳಲ್ಲಿ ಅಂದರೆ ಗುತ್ತಿಗೆದಾರರ ವಾಹನ ಅಪಘಾತಕ್ಕೀಡಾಗಿ ದುರಸ್ಥಿ ಅಸಾದ್ಯವೆಂದಾಗ ಪ್ರಸ್ತುತ ಕರಾರನ್ನು ಪರಿಸಮಾಪಿಗೊಳಿಸುವ ತಮ್ಮ ಇಂಗಿತವನ್ನು 30 ದಿನಗಳ ಸೂಚನೆಯನ್ನು ಕೊಟ್ಟು ಕಚೇರಿಗೆ ತಿಳಿಸತಕ್ಕದ್ದು. ಅಂತಹ ಸೂಚನೆಯನ್ನು ಒಕ್ಕೂಟವು ಪರಿಶೀಲಿಸಿ ಪ್ರತಿಶತ 50 ರವರೆಗೆ ಭದ್ರತಾ ಠೇವಣಿಯನ್ನು ಮುಟ್ಟುಗೋಲು ಹಾಕಿಕೊಂಡು ಗುತ್ತಿಗೆದಾರಿಕೆಯನ್ನು ರದ್ದುಪಡಿಸಲಾಗುವುದು.
8. ಸೂಚನಾಪತ್ರದಲ್ಲಿ ನಿಗದಿಪಡಿಸಿರುವಂತೆ ಸಕಾಲದಲ್ಲಿ ಗುತ್ತಿಗೆ ಆದೇಶ ಪಡೆದು ಗುತ್ತಿಗೆ ಕಾರ್ಯಗತಗೊಳಿಸಲು ವಿಫಲವಾದಲ್ಲಿ ಇ.ಎಂ.ಡಿ ಮೊಬಲಗನ್ನು ಮುಟ್ಟುಗೋಲು ಹಾಕಿಕೊಂಡು ಕಪ್ಪು ಪಟ್ಟಿಗೆ ಸೇರಿಸಲಾಗುವುದು.
9. ಅಸಮರ್ಪಕ ಗುತ್ತಿಗೆ ನಿರ್ವಹಣೆ/ವಾಹನ ವಿಳಂಬ/ಕಳ್ಳತನ ಮುಂತಾದ ತಪ್ಪುಗಳಿಗೆ ಕರಾರಿನಲ್ಲಿ ತಿಳಿಸಿರುವಂತೆ ಸೂಕ್ತ ದಂಡ ವಿಧಿಸಲಾಗುವುದು ಹಾಗೂ ಗುತ್ತಿಗೆದಾರಿಕೆಯನ್ನು ರದ್ದು ಪಡಿಸಿ ಭದ್ರತಾ ಠೇವಣಿ ಹಣವನ್ನು ಮುಟ್ಟುಗೋಲು ಹಾಕಿಕೊಳ್ಳಬಹುದಾದ ಅಧಿಕಾರವನ್ನು ವ್ಯವಸ್ಥಾಪಕ ನಿರ್ದೇಶಕರವರು ಹೊಂದಿರುತ್ತಾರೆ.
10. ಯಶಸ್ವಿಯಾದ ಗುತ್ತಿಗೆದಾರರು ಕಡ್ಡಾಯವಾಗಿ ಎರಡು ಭಾವಚಿತ್ರ, ಹಾಗೂ ಆದಾಯ ತೆರಿಗೆ ಪಾನ್ ಕಾರ್ಡ್ ಮಾಡಿಸಿ ಗುತ್ತಿಗೆ ಕೆಲಸದ ಆದೇಶವನ್ನು ಪಡೆಯುವಾಗ ಒಕ್ಕೂಟದಲ್ಲಿ ಗುತ್ತಿಗೆ ಪಡೆದ ಎರಡು ಸಾಕ್ಷಿದಾರರ ಸಹಿಯೊಂದಿಗೆ ಕಡ್ಡಾಯವಾಗಿ ಸಲ್ಲಿಸುವುದು.
11. ಮೇಲಿನ ನಿಬಂಧನೆಗಳಲ್ಲದೇ ಕಾಲ ಕಾಲಕ್ಕೆ ಸರಕಾರ/ಒಕ್ಕೂಟವು ಹೊರಡಿಸುವ ನಿಯಮಗಳೇನಾದರೂ ಬಂದಲ್ಲಿ ತಮಗು ಅಳವಡಿಸಲಾಗುವುದೆಂದು ತಿಳಿಯತಕ್ಕದ್ದು.
12. ಸಾಗಾಣಿಕೆ ಬಿಲ್ಲನ್ನು ವ್ಯವಸ್ಥಾಪಕ ನಿರ್ದೇಶಕರು, ಶಿವಮೊಗ್ಗ ಹಾಲು ಒಕ್ಕೂಟ ನಿ., ಮಾಚೇನಹಳ್ಳಿ, ಶಿವಮೊಗ್ಗ ಇವರ ಹೆಸರಿಗೆ ಪಾವತಿ ಕೋರಿ ಸಲ್ಲಿಸುವುದು.
13. ಯಾವುದಾದರೂ ತಂಟೆ ತಕರಾರುಗಳ ಉಂಟಾದಲ್ಲಿ ಸ್ಥಳೀಯ ಶಿವಮೊಗ್ಗ ನ್ಯಾಯಾಲಯದಲ್ಲಿ ಮಾತ್ರ ಇತ್ಯರ್ಥ ಮಾಡಿಕೊಳ್ಳವುದು. ಪ್ರತಿ ಮಾರ್ಗಕ್ಕೆ ನೀಡಬೇಕಾದ ಇ.ಎಂ.ಡಿ / ಭದ್ರತಾ ಠೇವಣಿ ಮತ್ತು / ಮಾರ್ಗಗಳ ವಿವರ ಮತ್ತು ಇತರೆ ನಿಬಂಧನೆಗಳ ವಿವರವಾದ ಷೆಡ್ಯೂಲ್‌ನ್ನು ಹಾಗೂ ಟೆಂಡರ್ ಪ್ರಕಟಣೆಗೆ ಸಂಬಂಧಿಸಿದಂತೆ ವಿವರವಾದ ಮಾಹಿತಿಯು ಟೆಂಡರ್ ಪುಸ್ತಕದಲ್ಲಿ ಲಭ್ಯವಿರುತ್ತದೆ.

## ವಿತರಣಾ ಮಾರ್ಗಗಳ ಷರತ್ತು ಮತ್ತು ನಿಬಂಧನೆಗಳು:-

1. ಟೆಂಡರ್ ಸಲ್ಲಿಸ ಬಯಸುವವರು ತಮ್ಮ ಹೆಸರಿಗೆ ಕಡ್ಡಾಯವಾಗಿ ವಾಹನವನ್ನು ಹೊಂದಿರತಕ್ಕದ್ದು. ವಾಹನ ಹೊಂದಿಲ್ಲದವರು ಟೆಂಡರ್‌ನಲ್ಲಿ ದರ ಒಪ್ಪಿಗೆಯಾದಲ್ಲಿ ಟೆಂಡರ್ ದರ ಒಪ್ಪಿಗೆ ಆದೇಶ ನೀಡಿದ 30 ದಿನಗಳೊಳಗಾಗಿ ಟೆಂಡರ್‌ನಲ್ಲಿ ಪ್ರಕಟಿಸಿದ ಮಾದರಿಯ/ಸಾಮರ್ಥ್ಯದ ವಾಹನವನ್ನು ಖರೀದಿಸಿ ನೀಡುವುದು. ತಪ್ಪಿದ್ದಲ್ಲಿ ಟೆಂಡರ್ ನಿಯಮಾನುಸಾರ ಇ.ಎಂ.ಡಿಯನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುವುದು.
2. ಇ-ಪ್ರೊಕ್ಯೂರ್‌ಮೆಂಟ್ ನಿಯಾಮವಳಿ ಅಡಿ ನೊಂದಣಿ ಮಾಡಿಸದ ಗುತ್ತಿಗೆದಾರರು ನೊಂದಣಿ ಮಾಡಿಸಿ ಗುತ್ತಿಗೆ ಅರ್ಜಿ ಸಲ್ಲಿಸಬಹುದು.

ಮುಂದುವರೆದಿದೆ. . . . . .

3. ಕನಿಷ್ಠ ಇ.ಎಂ.ಡಿ. ರೂ. 25,000/– ಆದರೆ ವಿತರಣಾ ಮಾರ್ಗದ ವಾಹನಗಳಿಗೆ ಅವುಗಳ ಮುಂದೆ ಸೂಚಿಸಿರುವಂತೆ ಇ.ಎಂ.ಡಿ ಬಾಬ್ತು ಡಿ.ಡಿ.ಯನ್ನು ಇ–ಪ್ರೋಕ್ಯೂರ್‌ಮೆಂಟ್ ವೇದಿಕೆಯ ನಿಯಾಮವಳಿಯಂತೆ ಸಲ್ಲಿಸುವುದು. ಕಡಿಮೆ ಇ.ಎಂ.ಡಿ ಪಾವತಿಸಿದಲ್ಲಿ ಟೆಂಡರ್‌ನ್ನು ತಿರಸ್ಕರಿಸಲಾಗುವುದು.
4. ಪ್ರತಿ ಮಾರ್ಗಕ್ಕೆ ಪ್ರತ್ಯೇಕ ಟೆಂಡರ್ ಮತ್ತು ಇ.ಎಂ.ಡಿ ಸಲ್ಲಿಸುವುದು. ಪ್ರತಿ ಕಿ.ಮೀ.ಗೆ ದರ ನಮೂದಿಸುವುದು ಮತ್ತು ದರವು ಎಲ್ಲಾ ತೆರಿಗೆಗಳನ್ನು ಒಳಗೊಂಡಿರುತ್ತದೆ. ಹಾಲು ವಿತರಣೆ ವಾಹನಕ್ಕೆ ಹಾಗೂ ಕಾರುಗಳಿಗೆ ರಾಜ್ಯ/ರಾಷ್ಟ್ರಿಯ ಹೆದ್ದಾರಿ ಶುಲ್ಕಗಳನ್ನು ಒಕ್ಕೂಟದ ವತಿಯಿಂದ ನೀಡಲಾಗುವುದಿಲ್ಲ ಮತ್ತು ಸೇವಾ ತೆರಿಗೆಯನ್ನು ಗುತ್ತಿಗೆದಾರರೆ ಭರಿಸಬೇಕಾಗಿರುತ್ತದೆ.
5. ಹಾಲು ವಿತರಣಾ ವಾಹನಗಳು 2010 ನೇ ಸಾಲಿನ ಅಥವಾ ನಂತರದ ಮಾಡೆಲ್ ಆಗಿರಬೇಕು. ಹಳದಿ ಬೋರ್ಡ್ ಹೊಂದಿದ್ದು ವಾಹನ ಚಾಲಕರು ಚಾಲನಾ ಪರವಾನಗಿ ಹಾಗೂ ಬ್ಯಾಡ್ಜ್ ಹೊಂದಿರತಕ್ಕದ್ದು.
6. ಹಾಲು ವಿತರಣಾ ಮಾರ್ಗದ ವಾಹನಗಳ ಪಥವನ್ನು ಕಛೇರಿಗೆ ಅವಶ್ಯ ಬಂದಲ್ಲಿ ಬದಲಾಯಿಸಲಾಗುವುದು. ಈ ಸಂದರ್ಭದಲ್ಲಿ ಕಿ.ಮೀ. ಅಂತರ ಕಡಿಮೆ ಅಥವಾ ಹೆಚ್ಚಿಗೆ ಆಗುವ ಸಾಧ್ಯತೆ ಇರುತ್ತದೆ. ಶೇ. 10 ಕ್ಕಿಂತ ಜಾಸ್ತಿ ಅಥವಾ ಕಡಿಮೆ ಆದಲ್ಲಿ ಪ್ರೋರೆಟಾ ಆಧಾರದಲ್ಲಿ ದರವನ್ನು ಕಡಿಮೆ ಅಥವಾ ಹೆಚ್ಚು ಮಾಡಲಾಗುವುದು.
7. ಗುತ್ತಿಗೆದಾರರ ಸೇವೆ ತೃಪ್ತಿಕರವಾಗಿರದಿದ್ದಲ್ಲಿ ಮಾರ್ಗಗಳ ಪುನರ್ ವಿಂಗಡಣೆ ಮತ್ತು ಮಾರ್ಗಗಳ ಗುತ್ತಿಗೆ ರದ್ದುಮಾಡುವುದು. ಇವುಗಳ ಬಗ್ಗೆ ತನ್ನ ಹಿತದೃಷ್ಟಿಯಿಂದ ಒಕ್ಕೂಟವು ಅವಶ್ಯಕತೆಗನುಗುಣವಾಗಿ ತೆಗೆದುಕೊಳ್ಳುವ ನಿರ್ಣಯಗಳಿಗೆ ಗುತ್ತಿಗೆದಾರರು/ ಟೆಂಡರ್‌ದಾರರು ಬದ್ಧವಾಗಿರಬೇಕು.
8. ಷಟಲ್ ಮಾರ್ಗದ ಗುತ್ತಿಗೆದಾರರು ಮುಖ್ಯ ಮಾರ್ಗದಿಂದ ಪಡೆದ ಹಾಲು ಮತ್ತು ಹಾಲಿನ ಉತ್ಪನ್ನಗಳ ಮೊತ್ತ, ಖಾಲಿ ಕ್ರೇಟ್‌ಗಳನ್ನು, ಕ್ಯಾನ್‌ಗಳನ್ನು ನಿಗದಿತ ಸ್ಥಳ ಮತ್ತು ಸಮಯದಲ್ಲಿ ಪಡೆಯುವುದು ಮತ್ತು ನೀಡುವುದು.
9. ಹಾಲು ವಿತರಣಾ ಮಾರ್ಗದ ಗುತ್ತಿಗೆದಾರರು ಹಾಲು ಮತ್ತು ಹಾಲಿನ ಉತ್ಪನ್ನಗಳ ಒಟ್ಟು ಮೊತ್ತವನ್ನು ಆಯಾ ದಿನವೇ ನಿಗಧಿತ ವೇಳೆಗೆ ಕಚೇರಿ/ಬ್ಯಾಂಕಿಗೆ ಪಾವತಿಸುವುದು. ಪೂರ್ಣ ಮೊತ್ತ ಪಾವತಿಸದೇ ಬಾಕಿ ಉಳಿಸಿಕೊಂಡಲ್ಲಿ ಮೊದಲ ದಿನ ಹಾಗೂ 2 ನೇ ದಿನದ ಬಾಕಿ ಮೊತ್ತಕ್ಕೆ ಶೇ 2% ರಷ್ಟು ದಂಡದ ಮೊತ್ತವನ್ನು 3 ನೇ ದಿನಕ್ಕೆ ಪಾವತಿಸುವುದು. 3 ನೇ ದಿನವೂ ಬಾಕಿ ಉಳಿಸಿಕೊಂಡಲ್ಲಿ ದಿನದ ಬಾಕಿ ಮೊತ್ತಕ್ಕೆ ಶೇ 3% ರಷ್ಟು ಬಡ್ಡಿ ಸೇರಿಸಿ ಪಾವತಿಸತಕ್ಕದ್ದು ಮತ್ತು ನಂತರವೂ ಪಾವತಿಸದಿದ್ದಲ್ಲಿ ಒಕ್ಕೂಟದ ನಿಯಮಾನುಸಾರ ಗುತ್ತಿಗೆ ರದ್ದುಪಡಿಸಲು ಕ್ರಮವಿಡಲಾಗುವುದು.
10. ಎಲ್ಲಾ ಸಾರಿಗೆ ಟೆಂಡರ್‌ದಾರರು ಶಾಸನ ಬದ್ಧವಾದ ರೀತಿಯಲ್ಲಿ ತಮ್ಮ ನೌಕರರಿಗೆ (ಚಾಲಕರು/ಕಂಡಕ್ಟರ್) ವೇತನ/ಭವಿಷ್ಯನಿಧಿ/ ಇ.ಎಸ್.ಐ ಮುಂತಾದವುಗಳನ್ನು ಪಾವತಿಸಬೇಕಾಗಿರುತ್ತದೆ. ಟೆಂಡರ್ ಪಡೆದ ಸಾರಿಗೆ ಗುತ್ತಿಗೆದಾರರೇ ತಮ್ಮ ನೌಕರರಿಗೆ ಶಾಸನ ಬದ್ಧವಾದ ರೀತಿಯಲ್ಲಿ ವೇತನ ಪಾವತಿಸತಕ್ಕದ್ದು ಹಾಗೂ ಇದಕ್ಕೆ ಒಕ್ಕೂಟವು ಜವಾಬ್ದಾರಿಯಾಗಿರುವುದಿಲ್ಲ.

**ಯಾವುದೇ ಕಾರಣ ನೀಡದೆ ಟೆಂಡರನ್ನು ಅಂಗಿಕರಿಸುವ/ತಿರಸ್ಕರಿಸುವ ಹಕ್ಕನ್ನು ವ್ಯವಸ್ಥಾಪಕ ನಿರ್ದೇಶಕರು ಹೊಂದಿರುತ್ತಾರೆ. ವ್ಯವಸ್ಥಾಪಕ ನಿರ್ದೇಶಕರ ತೀರ್ಮಾನವೇ ಅಂತಿಮವಾದುದು.**

ಹೆಚ್ಚಿನ ಮಾಹಿತಿಯನ್ನು ಶಿವಮೊಗ್ಗ, ದಾವಣಗೆರೆ ಮತ್ತು ಚಿತ್ರದುರ್ಗ ಹಾಲು ಒಕ್ಕೂಟದ ಕಛೇರಿ ವೇಳೆಯಲ್ಲಿ/ ಮಾರುಕಟ್ಟೆ ವಿಭಾಗದಿಂದ ಪಡೆಯಬಹುದು. **ದೂರವಾಣಿ : (08182) 246344. ಮತ್ತು** ಒಕ್ಕೂಟದ ವೆಬ್‌ಸೈಟ್ **www.shimul.coop** ಸಂಪರ್ಕಿಸಬಹುದು.

**ಸಹಿ/–**

ವ್ಯವಸ್ಥಾಪಕ ನಿರ್ದೇಶಕರು
ಶಿವಮೊಗ್ಗ, ದಾವಣಗೆರೆ ಮತ್ತು ಚಿತ್ರದುರ್ಗ ಜಿಲ್ಲಾ
ಸಹಕಾರ ಹಾಲು ಒಕ್ಕೂಟ, ನಿ.,

ದಿನಾಂಕ 11.10.2017
ಸ್ಥಳ : ಶಿವಮೊಗ್ಗ ಡೈರಿ